# ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ಧನಂಜಯ ಸರ್ಜಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.

## ವಿಷಯ

"ವಿಜಯವಾಣಿ" ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ "ಪ್ರವೇಶಾತಿ ನಂತರ ಶುಲ್ಕ ಪರಿಷ್ಕರಣೆ ಸರ್ಕಾರದ ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ಅವಾಂತರದಿಂದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಸಂಕಷ್ಟಕ್ಕೀಡಾಗಿದ್ದಾರೆ.

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಪ್ರವೇಶಾತಿ ಮುಗಿದ ನಂತರ, ಈ ಸಂಧರ್ಭದಲ್ಲಿ ಶುಲ್ಕ ಪರಿಷ್ಕರಿಸಿ ಹೆಚ್ಚಳ ಮಾಡಿರುವುದು ಕಾಲೇಜು ಶಿಕ್ಷಣ ಇಲಾಖೆಯ ಬೇಜವಾಬ್ದಾರಿ ತನಕ್ಕೆ ಹಿಡಿದ ಕೈಗನ್ನಡಿಯಾಗಿದೆ. 2023-2024ನೇ ಸಾಲಿನಲ್ಲಿದ್ದ ಶುಲ್ಕವನ್ನೇ 2024-2025 ನೇ ಸಾಲಿಗೂ ಮುಂದುವರಿಸಲಾಗಿದೆ ಎಂಬ ಆದೇಶವನ್ನು ಉನ್ನತ ಶಿಕ್ಷಣ ಇಲಾಖೆ ಪ್ರಕಟಿಸಿತ್ತು. ಆದೇಶ ಹೊರಡಿಸಿದ ಒಂದೂವರೆ ತಿಂಗಳಿನಲ್ಲಿಯೇ ಬೋಧನ ಶುಲ್ಕ, ಪ್ರಯೋಗಾಲಯ, ಕಾಲೇಜು ಅಭಿವೃದ್ಧಿ ಶುಲ್ಕ ಸೇರಿ ಇತರೆ ಶುಲ್ಕವನ್ನು ಪರಿಷ್ಕರಣೆ ಮಾಡಿದೆ.

ಈಗಾಗಲೇ ರಾಜ್ಯದ್ಯಾಂತ ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ಪ್ರಕ್ರಿಯೆಯು ಕಳೆದ ಅಕ್ಟೋಬರ್-ನವಂಬರ್ ತಿಂಗಳಲ್ಲಿಯೇ ಬಹುತೇಕ ಮುಗಿದಿದ್ದು ತರಗತಿಗಳು ಆರಂಭವಾಗಿದೆ. ಆದರೆ ಈಗ ಕಾಲೇಜು ಶಿಕ್ಷಣ ಇಲಾಖೆಯು ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಶುಲ್ಕ ಪರಿಷ್ಕರಿಸಿ ಹೆಚ್ಚಳ ಮಾಡಿ ಆದೇಶ ಹೊರಡಿಸಿರುವುದು ಬಹುತೇಕ ಆರ್ಥಿಕ ಬಡ ವಿದ್ಯಾರ್ಥಿಗಳೇ ಹೆಚ್ಚಾಗಿರುವ ಸರ್ಕಾರಿ ಕಾಲೇಜುಗಳಲ್ಲಿ ಮತ್ತೊಮ್ಮೆ ಹೆಚ್ಚುವರಿ ಶುಲ್ಕ ಪಾವತಿಸಬೇಕೆಂಬುವುದು ಬಡ ವಿದ್ಯಾರ್ಥಿಗಳನ್ನು ಆತಂಕಕ್ಕೀಡುಮಾಡಿದೆ.

ತುಘಲಕ್ ದರ್ಬಾರ್‌ನಂತೆ ವರ್ತಿಸುತ್ತಿರುವ ಕಾಲೇಜು ಶಿಕ್ಷಣ ಇಲಾಖೆ ಮತ್ತು ಸರ್ಕಾರ ನವೆಂಬರ್ 7 ಮತ್ತು 8 ರಂದು ಸರ್ಕಾರ ಮತ್ತು ಆಯುಕ್ತಾಲಯದ ಹಂತದಲ್ಲಿ ಶುಲ್ಕ ಪರಿಷ್ಕರಣೆ ಆದೇಶ ಆಗಿದ್ದರೂ, ಆದೇಶ ಮುಚ್ಚಿಟ್ಟು ಶೈಕ್ಷಣಿಕ ವರ್ಷದ ಮಧ್ಯದಲ್ಲಿ ತರಗತಿಗಳು ಪ್ರಾರಂಭವಾದ ನಂತರ ಆದೇಶ ಪ್ರಕಟಿಸಿರುವುದು ಅನುಮಾನ ಹುಟ್ಟಿಸುತ್ತಿದೆ.

ಸನ್ಮಾನ್ಯ ಸಭಾಪತಿಯವರೇ.

ನಾನು ತಮ್ಮ ಮೂಲಕ ಶೂನ್ಯವೇಳೆಯಲ್ಲಿ ಆಗ್ರಹಿಸುವುದೇನೆಂದರೇ, ಗೊಂದಲಮಯವಾದ ಮತ್ತು ಬಡ ವಿದ್ಯಾರ್ಥಿಗಳ ಸಂಕಷ್ಟಕ್ಕೆ ಕಾರಣವಾದ ಶುಲ್ಕ ಪರಿಷ್ಕರಣೆ ಆದೇಶವನ್ನು ಯಾವುದೇ ವಿಳಂಬವಿಲ್ಲದೇ ಹಿಂದೆಗೆದುಕೊಂಡು, ವಿದ್ಯಾರ್ಥಿಗಳ ಹಿತ ಕಾಪಡುವಂತೆ ಆಗ್ರಹಿಸುತ್ತೇನೆ.

## ಉತ್ತರ

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 2019 ರಿಂದ 2023 ನೇ ಸಾಲಿನವರೆಗೂ ಯಾವುದೇ ಶುಲ್ಕಗಳನ್ನು ಹೆಚ್ಚಿಸಿರುವುದಿಲ್ಲ ಹಾಗೂ ಸ್ನಾತಕ ಪದವಿಯ ಕೆಲವು ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗೆ ಈ ಹಿಂದೆಯೇ ಬಳಕೆ ಶುಲ್ಕವನ್ನು ನಿಗಧಿಪಡಿಸಿದ್ದು 2024-25 ನೇ ಸಾಲಿನಲ್ಲಿದ್ದ ಶುಲ್ಕದಲ್ಲಿ ಯಾವುದೇ ಶುಲ್ಕ ಪರಿಷ್ಕರಣೆ ಮಾಡಿರುವುದಿಲ್ಲ.

ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳ ಶುಲ್ಕ ರಚನೆಯಲ್ಲಿ ಸಾಂಸ್ಕೃತಿಕ ಚಟುವಟಿಕೆ ಶುಲ್ಕ, ಕಾಲೇಜು ಮ್ಯಾಗಜಿನ್ ಶುಲ್ಕ, ಪರಿಚಯ ಪುಸ್ತಕ ಶುಲ್ಕ, ಗುರುತಿನ ಚೀಟಿ ಶುಲ್ಕ, ಭಾರತೀಯ ರೆಡ್ ಕ್ರಾಸ್ ಶುಲ್ಕ, ಮತ್ತು ಕಾಲೇಜು ಅಭಿವೃದ್ಧಿ ಶುಲ್ಕಗಳು, ಒಟ್ಟು ರೂ 735/-ಗಳು, ಸೇರ್ಪಡೆಗೊಂಡಿರದ ಕಾರಣ 2024-25 ನೇ ಸಾಲಿನ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ ಸದರಿ ಶುಲ್ಕಗಳನ್ನು ಸ್ನಾತಕ ಪದವಿ ಶುಲ್ಕ ರಚನೆಯಲ್ಲಿರುವಂತೆ ಸೇರಿಸಲಾಗಿರುತ್ತದೆ.

ಮುಂದುವರೆದು ಈ ಕೆಳಕಂಡ ವಿಜ್ಞಾನ ವಿಷಯಗಳನ್ನೊಳಗೊಂಡ MSc ಸ್ನಾತಕೋತ್ತರ ಪದವಿ, MCA ಮತ್ತು MBA (ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್ ಅಪ್ಲಿಕೇಷನ್ಸ್) ಕೋರ್ಸ್ ಅನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಮಾತ್ರ 2024-25 ನೇ ಸಾಲಿನಿಂದ ಸ್ನಾತಕ ಪದವಿ ವಿದ್ಯಾರ್ಥಿಗಳಿಗಿರುವ ಶುಲ್ಕದಂತೆ ಬಳಕೆ ಶುಲ್ಕವನ್ನು ನಿಗಧಿಪಡಿಸಲಾಗಿರುತ್ತದೆ.

| **ಬಳಕೆ ಶುಲ್ಕ** | |
|---|---|
| MSc (ಕಂಪ್ಯೂಟರ್ ಸೈನ್ಸ್ , ಮೈಕ್ರೋ ಬಯಾಲಜಿ, ಬಯೋ ಟೆಕ್ನಾಲಜಿ, ಮತ್ತು ಇನ್ಫಾರ್ಮೇಷನ್ ಸೈನ್ಸ್) | 3000/- |
| MCA - ಕಂಪ್ಯೂಟರ್ ಕೋರ್ ಸಬ್ಜೆಕ್ಟ್ | 6000/- |
| MBA (ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್ ಅಪ್ಲಿಕೇಷನ್ಸ್) | 1000/- |

ಪರಿಶಿಷ್ಟ ಜಾತಿ/ ಪಂಗಡ, ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆಯಲು ಅವಕಾಶವಿದ್ದು, ಸದರಿ ಎಲ್ಲಾ ವಿದ್ಯಾರ್ಥಿಗಳು ಮೇಲ್ಕಂಡ ಬಳಕೆ ಶುಲ್ಕದ ಮರುಭರಣೆಗೆ ಅರ್ಹರಿರುತ್ತಾರೆ. ಮುಂದುವರೆದು ಎಲ್ಲಾ ವಿದ್ಯಾರ್ಥಿನಿಯರಿಗೆ ಮೇಲ್ಕಂಡ ಬಳಕೆ ಶುಲ್ಕವೂ ಸೇರಿದಂತೆ ಎಲ್ಲಾ ಶುಲ್ಕಗಳಿಂದ ವಿನಾಯಿತಿ ಇರುತ್ತದೆ.

ರಾಜ್ಯದಲ್ಲಿ ಮೇಲ್ಕಂಡ ಕೋರ್ಸ್ ಗಳು ಈ ಕೆಳಕಂಡಂತೆ ಚಾಲ್ತಿಯಲ್ಲಿರುತ್ತವೆ.

| | |
|---|---|
| MSc (ಕಂಪ್ಯೂಟರ್ ಸೈನ್ಸ್, ಮೈಕ್ರೋ ಬಯಾಲಜಿ, ಬಯೋ ಟೆಕ್ನಾಲಜಿ, ಮತ್ತು ಇನ್ಫಾರ್ಮೇಷನ್ ಸೈನ್ಸ್) | 6 ಕಾಲೇಜುಗಳು |
| MCA - ಕಂಪ್ಯೂಟರ್ ಕೋರ್ ಸಬ್ಜೆಕ್ಟ್ | ಯಾವುದು ಇಲ್ಲ |
| MBA (ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್ ಅಪ್ಲಿಕೇಷನ್ಸ್) | ಯಾವುದು ಇಲ್ಲ |

ಆದ್ದರಿಂದ MSc (ಕಂಪ್ಯೂಟರ್ ಸೈನ್ಸ್ , ಮೈಕ್ರೋ ಬಯಾಲಜಿ, ಬಯೋ ಟೆಕ್ನಾಲಜಿ, ಮತ್ತು ಇನ್ಫಾರ್ಮೇಷನ್ ಸೈನ್ಸ್) ಕೋರ್ಸ್‌ಗಳು ಅತಿ ಕಡಿಮೆ ಸಂಖ್ಯೆಯ ಕಾಲೇಜುಗಳಲ್ಲಿದ್ದು, ವಿದ್ಯಾರ್ಥಿವೇತನದ ಮೂಲಕ ಬಳಕೆ ಶುಲ್ಕದ ಮರುಭರಣೆಗೆ ಅವಕಾಶವಿರುವುದರಿಂದ ಹಾಗೂ ಎಲ್ಲಾ ವಿದ್ಯಾರ್ಥಿನಿಯರಿಗೆ ಮೇಲ್ಕಂಡ ಬಳಕೆ ಶುಲ್ಕದಿಂದ ವಿನಾಯಿತಿ ಇರುವುದರಿಂದ ಸರ್ಕಾರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ವಿದ್ಯಾರ್ಥಿಗಳಿಗೆ ಈ ಶುಲ್ಕ ಪರಿಷ್ಕರಣೆಯಿಂದ ಯಾವುದೇ ತೊಂದರೆಯಾಗುವುದಿಲ್ಲ.

**ಇಡಿ 183 ಯುಇಸಿ 2024 (ಇ)**

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು